**SPL.C. 5136/2024**

ಚಾ.ಸಾ **:5** ಪ್ರಾ.ಸಾ **:5**

ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ**,** ರಾಯಚೂರು ಪೀಠ ಸಿಂಧನೂರು

| | | |
|---|---|---|
| ಸಾಕ್ಷಿಯ ಹೆಸರು | : | ಲಕ್ಷ್ಮೀ |
| ತಂದೆ ಹೆಸರು | : | ಆದೆಪ್ಪ |
| ವಯಸ್ಸು | : | 60 ವರ್ಷ |
| ಉದ್ಯೋಗ | : | ಮನೆ ಕೆಲಸ |
| ವಿಳಾಸ | : | ಈ.ಜೆ.ಉದ್ಬಾಳ |

ಸಾಕ್ಷಿಗೆ ದಿನಾಂಕ **26-11-2025** ರಂದು ಪ್ರಮಾಣ ವಚನ ಭೋದಿಸಲಾಯಿತು**.**

<u>ಮುಖ್ಯವಿಚಾರಣೆ **:** ಮಾನ್ಯ ಸರ್ಕಾರಿ ಅಭೀಯೋಜಕರಿಂದ **:**</u>

ನಾನು ಬ್ಯಾಗಾರ ಜಾತಿಗೆ ಸೇರಿರುತ್ತೇನೆ. ಈ ಕೇಸಿನ ಎಲ್ಲಾ ಆರೋಪಿತರು ಕುರುಬ ಜನಾಂಗಕ್ಕೆ ಸೇರಿದ್ದಾರೆ.

2. ಸುಮಾರು 3 ವರ್ಷಗಳ ಹಿಂದೆ ಬೆಳಿಗ್ಗೆ 09-00 ಗಂಟೆಗೆ ನೀರಿನ ಟ್ಯಾಂಕಿನ ಹತ್ತಿರ ಜಗಳ ಆಗಿದೆ. ನಾನು ಮನೆಯಲ್ಲಿದ್ದಾಗ, ನನ್ನ ಮಗನಾದ ಚಾ.ಸಾ1 ಮತ್ತು ಆತನ ಹೆಂಡತಿಯಾದ ಚಾ.ಸಾ2 ಕಿರುಚಾಡುತ್ತಿದ್ದರಿಂದ ನಾನು ಆ ಸ್ಥಳಕ್ಕೆ ಹೋಗಿದ್ದೆನು. ನನ್ನೊಂದಿಗೆ ಚಾ.ಸಾ.3 ಮತ್ತು 4 ಸಹ ಆ ಸ್ಥಳಕ್ಕೆ ಬಂದಿದ್ದರು.

3. ಆ ಸ್ಥಳದಲ್ಲಿ ಈ ಕೇಸಿನ 20 ಜನರು ಚಾ.ಸಾ1 ಮತ್ತು 2 ಇವರನ್ನು ಕಟ್ಟಿಗೆಯಿಂದ ಮತ್ತು ಕಲ್ಲಿನಿಂದ ಬಡಿದಿದ್ದಾರೆ. (ಎಲ್ಲಾ ಆರೋಪಿತರು ಗೈರು ಹಾಜರಿದ್ದಾರೆ. ಅವರನ್ನು ಗುರುತಿಸುವ ಕುರಿತು ಯಾವುದೇ ತಕರಾರು ಇರುವುದಿಲ್ಲ ಎಂದು ಆರೋಪಿತರ ಪರವಾಗಿ ಎಮ್. ಎಸ್. ಬಿ. ವಕೀಲರು ಬಿ.ಬಿ.ಎ. ವಕೀಲರ ಪರವಾಗಿ ತಿಳಿಸಿರುತ್ತಾರೆ.)

4. ನಮ್ಮನ್ನು ನೋಡಿ ಆ ಎಲ್ಲಾ ಆರೋಪಿತರು ಬ್ಯಾಗಾರ ಸೂಳೆಯರು ಬಂದಿದ್ದಾರೆ ಎಂದು ಹೇಳಿದ್ದಾರೆ.

5. ಚಾ.ಸಾ3 ಈತನನ್ನು ಆರೋಪಿತರಲ್ಲಿ ಒಬ್ಬ ಕಟ್ಟಿಗೆಯಿಂದ ಬಡಿದಿದ್ದಾನೆ. ಆ 20 ಜನರಲ್ಲಿ ಇಬ್ಬರು-ಮೂರು ಜನ ಆರೋಪಿತರು ಚಾ.ಸಾ4 ಇವಳ ಕೂದಲನ್ನು ಹಿಡಿದು ಜಗ್ಗಿದ್ದಾರೆ.

6. ಆರೋಪಿ ಸಂ. 6 ಮತ್ತು 7 ಇವರು ನನ್ನನ್ನು ಬ್ಯಾಗಾರ ಸೂಳೆ ಎಂದು ಬೈದಿದ್ದಾರೆ ಮತ್ತು ನನ್ನನ್ನು ಒದ್ದಿದ್ದಾರೆ.

7. ನಾಗರಾಜ, ಹುಲ್ಲೇಶ ಮತ್ತು ಮೌನೇಶ ಆ ಸ್ಥಳಕ್ಕೆ ಬಂದು ಜಗಳ ಬಿಡಿಸಿದ್ದಾರೆ. ನಾವೆಲ್ಲರೂ ಅದೇ ದಿನ ಪೊಲೀಸ್ ಠಾಣೆಗೆ ಹೋಗಿದ್ದೇವು. ಅಲ್ಲಿಂದ ನಾವೆಲ್ಲರೂ ಸರಕಾರಿ ಆಸ್ಪತ್ರೆಗೆ ಹೋಗಿದ್ದೇವು. ಅಲ್ಲಿ ಒಂದು ದಿನ ಇದ್ದು, ಮರುದಿನ ನಾವೆಲ್ಲರೂ ಮನೆಗೆ ಹೋಗಿದ್ದೇವೆ. ಪೊಲೀಸರ ಮುಂದೆ ಜಗಳ ಆಗಿದೆ ಎಂದು ಹೇಳಿದ್ದೇನೆ.

8. ಸಾಕ್ಷಿ ನ್ಯಾಯಾಲಯದ ಮುಂದಿರುವ ಮುದ್ದೆಮಾಲು 1 ರಿಂದ 4 ರಲ್ಲಿರುವ ಬಡಿಗೆ ಮತ್ತು ಕಲ್ಲುಗಳಿಂದ ಆರೋಪಿತರು ಬಡಿದಿದ್ದಾರೆ ಎಂದು ಗುರುತಿಸಿದ್ದಾರೆ.

<u>ಪಾಟೀ ಸವಾಲು**: 1** ರಿಂದ **20** ನೇ ಆರೋಪಿ ಪರ ವಕೀಲರಿಂದ**:**</u>

ಆರೋಪಿತರ ಪರವಾಗಿ ಎಮ್. ಎಸ್. ಬಿ. ವಕೀಲರು ಸಮಯ ಕೋರಿದ್ದಾರೆ. ಯಾವುದೇ ಸಕಾರಣ ಇಲ್ಲದೆ ಇರುವುದರಿಂದ ಅವರ ವಿನಂತಿಯನ್ನು ತಳ್ಳಿ ಹಾಕಿ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.)

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ. ಇದೆ

ಸಹಿ/-

ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ರಾಯಚೂರು ಪೀಠ ಸಿಂಧನೂರು